***P.W-1***

**ದಿನಾಂಕಃ 06-03-2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.**

ನಾನು ಈ ದಿನ ನ್ಯಾಯಾಲಯಕ್ಕೆ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದೇನೆ. ಸದರಿ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಇರುವ ಎಲ್ಲಾ ವಿಷಯಗಳು ಸತ್ಯವಾಗಿವೆ.

**ಮುಖ್ಯ ವಿಚಾರಣೆ: ಅರ್ಜಿದಾರರ ಪರ ವಕೀಲರಿಂದಃ**

ನಿ.ಪಿ-1 : ಪ್ರಥಮ ವರ್ತಮಾನ ವರದಿಯ ದೃಢೀಕೃತ ಪ್ರತಿ,

ನಿ.ಪಿ-2 : ದೂರಿನ ದೃಢೀಕೃತ ಪ್ರತಿ,

ನಿ.ಪಿ-3 : ಸ್ಥಳ ಪಂಚನಾಮೆಯ ದೃಢೀಕೃತ ಪ್ರತಿ,

ನಿ.ಪಿ-4 : ಐ.ಎಂ.ವಿ ವರದಿಯ ದೃಢೀಕೃತ ಪ್ರತಿ,

ನಿ.ಪಿ-5 : ಗಾಯದ ಪ್ರಮಾಣ ಪತ್ರದ ದೃಢೀಕೃತ ಪ್ರತಿ,

ನಿ.ಪಿ-6 : ಅಂತಿಮ ವರದಿಯ ದೃಢೀಕೃತ ಪ್ರತಿ,

ನಿ.ಪಿ-7 : ಬಿಡುಗಡೆ ಪ್ರಮಾಣ ಪತ್ರ,

ನಿ.ಪಿ-8 : ನನ್ನ ಅಂಗನ್ಯೂನ್ಯತೆ ಪ್ರಮಾಣ ಪತ್ರ,

ನಿ.ಪಿ-9 : ಒಟ್ಟು 2 ಎಕ್ಸ-ರೇ ಪಿಲ್ಮಗಳು,

ನಿ.ಪಿ-10 : ಆಧಾರ ಕಾರ್ಡನ ನೋಟರೈಜ್ಡ ಪ್ರತಿ,
(ಮೂಲ ಪ್ರತಿಯೊಂದಿಗೆ ತಾಳೆ ಮಾಡಿ ಹಿಂದಿರುಗಿಸಲಾಗಿದೆ)

ನಿ.ಪಿ-11 : ಪಾನ್ ಕಾರ್ಡನ ನೋಟರೈಜ್ಡ ಪ್ರತಿ, (ಮೂಲ ಪ್ರತಿಯೊಂದಿಗೆ ತಾಳೆ ಮಾಡಿ ಹಿಂದಿರುಗಿಸಲಾಗಿದೆ)

ನಿ.ಪಿ-12 : ಬ್ಯಾಂಕ್ ಪಾಸ್ ಬುಕ್ ನ ನೋಟರೈಜ್ಡ ಪ್ರತಿ,
(ಮೂಲ ಪ್ರತಿಯೊಂದಿಗೆ ತಾಳೆ ಮಾಡಿ ಹಿಂದಿರುಗಿಸಲಾಗಿದೆ)

ಎಂದು ಗುರುತಿಸಲಾಯಿತು.

ಅರ್ಜಿಯಲ್ಲಿ ಕೋರಿ ಕೊಂಡಂತೆ ಆದೇಶ ಆಗಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

**ಪಾಟೀ ಸವಾಲುಃ** 1 ನೇ ಎದುರುದಾರರ ಪರ ವಕೀಲರನ್ನು ಪದೇ-ಪದೇ ಕೂಗಿ ಕರೆಯಿಸಲಾಗಿ, ಗೈರು ಹಾಜರು ಇರುವುದರಿಂದ ಪಾಟೀ ಸವಾಲು ಇಲ್ಲಾ ಎಂದು ತೆಗೆದುಕೊಳ್ಳಲಾಯಿತು .

**ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ.ಆರ್.ಎಸ್.ಎಸ್.ವಕೀಲರಿಂದಃ**

1. ನಾನು ಬಸ್ ನಲ್ಲಿ ಹೋಗುತ್ತಿದ್ದೆನು. ಎದುರಿನಿಂದ ಲಾರಿ ಬಂದು ಬಸ್ ಗೆ ಡಿಕ್ಕಿ ಪಡಿಸಿರುತ್ತದೆ. ಲಾರಿ ಚಾಲಕ ತನ್ನ ಲಾರಿಯನ್ನು ಬಹಳ ನಿಧಾನವಾಗಿ ಚಲಾಯಿಸುತ್ತಿದ್ದು ಅಪಘಾತಕ್ಕೆ ಆತನ ತಪ್ಪು ಏನು ಇಲ್ಲ ಎಂದರೆ ಸರಿಯಲ್ಲ. ನಾನು ಪ್ರಯಾಣಿಸುತ್ತಿದ್ದ ಬಸ್ ಚಾಲಕನ ತಪ್ಪಿನಿಂದಲೆ ಈ ಅಪಘಾತ ಆಗಿದೆ ಎಂದರೆ ಸರಿಯಲ್ಲ. ಅಪಘಾತದ ಸಮಯದಲ್ಲಿ ಲಾರಿಯ ಚಾಲಕನಿಗೆ ಚಾಲನಾ ಪರವಾನಿಗೆ ಇರಲಿಲ್ಲ ಎಂದರೆ ಸಾಕ್ಷಿ ಅದರ ಬಗ್ಗೆ ಮಾಹಿತಿ ಇಲ್ಲ ಎಂದು ಹೇಳುತ್ತಾರೆ. ಅದೇ ರೀತಿ ಸದರಿ ಲಾರಿಗೆ ಫರ್ಮಿಟ್ ಮತ್ತು ಎಫ್‌ಸಿ ಇರಲಿಲ್ಲ ಎಂದರೆ ಸಾಕ್ಷಿ ನನಗೆ ಮಾಹಿತಿ ಇಲ್ಲ ಎಂದು ಹೇಳುತ್ತಾರೆ.

2. ಅಪಘಾತ ವಾದ ತಕ್ಷಣ ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆ ಗೆ ನನ್ನನ್ನು ಕರೆದುಕೊಂಡು ಹೋಗಿ ದಾಖಲಿಸಿರುತ್ತಾರೆ. ಆಸ್ಪತ್ರೆಯಲ್ಲಿ ನಾನು ಒಟ್ಟು 10 ದಿನ ಒಳರೋಗಿಯಾಗಿ ದಾಖಲಾಗಿದ್ದೆನು. ಅಪಘಾತದಲ್ಲಿ ನನ್ನ ಬಲಗೈ, ಬಲತೊಡೆಗೆ ಪೆಟ್ಟಾಗಿರುತ್ತದೆ. ಅಪಘಾತದಲ್ಲಿ ನನಗೆ ಯಾವುದೆ ಮೂಳೆ ಮುರಿತ ಆಗಿಲ್ಲ ಎಂದರೆ ಸರಿಯಲ್ಲ. ಮೆಗ್ಗಾನ್ ಆಸ್ಪತ್ರೆಯಲ್ಲಿ ನಾನು ಒಳರೋಗಿಯಾಗಿ ಚಿಕಿತ್ಸೆ ಪಡೆದಿಲ್ಲ ಎಂದರೆ ಸರಿಯಲ್ಲ. ನಾನು ಹಾಜರು ಪಡಿಸಿದ ವೈದ್ಯಕೀಯ ದಾಖಲೆಗಳಲ್ಲಿ ಆ ರೀತಿ ಮೂಳೆ ಮುರಿತ ಆತ ಬಗ್ಗೆ ಯಾವುದೆ ನಮೂದು ಇಲ್ಲ ಎಂದರೆ ಸರಿಯಲ್ಲ. ನಿಪಿ-7 ಡಿಸ್ಚಾರ್ಜ ಸಮರಿಯನ್ನು ಈ ಕೇಸಿಗೊಸ್ಕರ ಸೃಷ್ಠಿ ಮಾಡಿ ಹಾಜರು ಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-7 ಡಿಸ್ಚಾರ್ಜ ಸಮರಿಯನ್ನು ಕೈಯಲ್ಲಿ ಬರೆಯಿಸಿ ಸೃಷ್ಠಿ ಮಾಡಿ ಹಾಜರು ಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಯಾವುದೆ ಮೂಳೆ ಮುರಿತ ಆಗಿಲ್ಲ, ಕೇವಲ ಸಾದಾ ಸ್ವರೂಪದ ಗಾಯಗಳು ಆಗಿವೆ ಎಂದರೆ ಸರಿಯಲ್ಲ. ಚಿಕಿತ್ಸೆ ಕೊಡದ ವೈದ್ಯರಿಂದ ನಿಪಿ-8 ಸುಳ್ಳು ಅಂಗನ್ಯೂನ್ಯತೆ ಪ್ರಮಾಣ ಪತ್ರ ತಂದು ಹಾಜರು ಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಕೇಸ್ ಶೀಟ್ ಹಾಜರು ಪಡಿಸಲು ತೊಂದರೆ ಇರುವುದಿಲ್ಲ. ಮೆಗ್ಗಾನ್ ಆಸ್ಪತ್ರೆಯಿಂದ ಡಿಸ್ಚಾರ್ಜ ಆದ ನಂತರ ಬೇರೆ ಎಲ್ಲೂ ನಾನು ಒಳರೋಗಿಯಾಗಿ ಚಿಕಿತ್ಸೆ ಪಡೆದಿರುವುದಿಲ್ಲ. ನನ್ನ ಚಿಕಿತ್ಸೆಗಾಗಿ ರೂ.2,00,000/- ಓಡಾಟದ ಸಲುವಾಗಿ ರೂ.50, 000/- ಖರ್ಚು ಮಾಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಬಗ್ಗೆ ಯಾವುದೆ ದಾಖಲೆ ಹಾಜರು ಪಡಿಸಿಲ್ಲ ಎಂದರೆ ಸರಿ. ಇನ್ನು ಹೆಚ್ಚಿನ ಚಿಕಿತ್ಸೆಗಾಗಿ

ರೂ.1,20,000/- ಬೇಕು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3. ನಾನು ರಾಣೇಬೆನ್ನೂರಿನ ಗೌರಿಶಂಕರನಗರದಿಂದ ಬಂದಿರುತ್ತೇನೆ. ಅಪಘಾತದಲ್ಲಿ ನನಗೆ ಸಾದಾ ಗಾಯ ಆಗಿದ್ದರಿಂದ ನಾನು ಈಗ ಸಂಪೂರ್ಣವಾಗಿ ಗುಣಮುಖವಾಗಿರುತ್ತೇನೆ ಎಂದರೆ ಸರಿಯಲ್ಲ.

4. ಬ್ಯಾಡಗಿ ತಾಲೂಕು ಮಾಸಣಗಿ ಗ್ರಾಮ ನನ್ನ ಖಾಯಂ ವಿಳಾಸ ಆಗಿರುತ್ತದೆ. ನಾನು ರಾಣೇಬೆನ್ನೂರಿನಲ್ಲಿ ನನ್ನ ಚಿಕ್ಕಮ್ಮನ ಮನೆಯಲ್ಲಿ ವಾಸವಾಗಿರುತ್ತೇನೆ. ಆ ಬಗ್ಗೆ ಯಾವುದೆ ದಾಖಲಾತಿ ಹಾಜರು ಪಡಿಸಿರುವುದಿಲ್ಲ. ಯಾವುದೆ ದಾಖಲೆ ಹಾಜರು ಪಡಿಸದೆ ರಾಣೇಬೆನ್ನೂರನ ಗೌರಿಶಂಕರ ನಗರದಲ್ಲಿ ವಾಸವಾಗಿದ್ದೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಅಪಘಾತ ಶಿವಮೊಗ್ಗ ಜಿಲ್ಲೆಯಲ್ಲಿ ಆಗಿದ್ದು ಹಾಗೂ ನಾನು ಬ್ಯಾಡಗಿ ತಾಲೂಕಿನ ಖಾಯಂ ವಾಸಿಯಾಗಿರುವುದರಿಂದ ಈ ನ್ಯಾಯಾಲಯಕ್ಕೆ ಈ ಅರ್ಜಿ ಸಲ್ಲಿಸಲು ಬರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಹುಟ್ಟಿದ ದಿನಾಂಕ 21-07-1984 ಎಂದರೆ ಸರಿ. ಅಪಘಾತದ ಸಮಯದಲ್ಲಿ ನನಗೆ 46 ವರ್ಷ ವಯಸ್ಸಾಗಿತ್ತು ಎಂದರೆ ಸಾಕ್ಷಿ 40 ವರ್ಷ ವಯಸ್ಸಾಗಿತ್ತು ಎಂದು ಹೇಳುತ್ತಾರೆ. ಮೆಗ್ಗಾನ್ ಆಸ್ಪತ್ರೆಯ ಮೂಲ ಎಕ್ಸರೆ ಹಾಜರು ಪಡಿಸಲು ತೊಂದರೆ ಇರುವುದಿಲ್ಲ. ನಾನು ಈಗ ಹಾಜರು ಪಡಿಸಿರುವ ಎಕ್ಸರೆ ನನಗೆ ಸಂಬಂಧಿಸಿದ್ದಲ್ಲ ಎಂದರೆ ಸರಿಯಲ್ಲ. ಕಾಲಮಿತಿ ಒಳಗೆ ಈ ಅರ್ಜಿ ಸಲ್ಲಿಸದ ಕಾರಣ ನನ್ನ ಅರ್ಜಿ ಊರ್ಜಿತವಾಗುವುದಿಲ್ಲ ಎಂದರೆ ಸರಿಯಲ್ಲ.

5. ದೂರಿನಲ್ಲಿ ನನ್ನ ಹೆಸರು ಇರುವುದಿಲ್ಲ ಎಂದರೆ ಸರಿ. ನಾನು ಬಸ್ ನಲ್ಲಿ ಪ್ರಯಾಣಿಸುತ್ತಿದ್ದೆನು. ಆ ಬಗ್ಗೆ ನನ್ನ ಬಳಿ ಯಾವುದೆ ಟಿಕೆಟ್ ಇರುವುದಿಲ್ಲ. ಆ ದಿನ ಮಂದಾರ್ಥಿ ದೇವಸ್ಥಾನಕ್ಕೆ ಬಸ್ ನಲ್ಲಿ ಹೋಗುತ್ತಿದ್ದೆನು. ಆ ದಿನ ನಾನು ಬಸ್ ನಲ್ಲಿ ಪ್ರಯಾಣ ಮಾಡುತ್ತಿರಲಿಲ್ಲ ಆದ್ದರಿಂದ ಅಪಘಾತ ದಲ್ಲಿ ಗಾಯಗೊಳ್ಳುವ ಪ್ರಮೇಯವೆ ಉದ್ಭವಿಸುವುದಿಲ್ಲ ಎಂದರೆ ಸರಿಯಲ್ಲ. ಆ ಕಾರಣದಿಂದಲೆ ಎಫ್ ಐ ಆರ್ ನಲ್ಲಿ ನನ್ನ ಹೆಸರು ನಮೂದಿಲ್ಲ ಎಂದರೆ ಸರಿಯಲ್ಲ. ಸಂಬಂಧಪಟ್ಟವರ ಜೊತೆ ಮಿಲಾಪೆಯಾಗಿ ನಾನು ಅಪಘಾತದಲ್ಲಿ ಗಾಯಗೊಂಡಿದ್ದೆ ಎಂದು ಈ ಸುಳ್ಳು ಕೇಸ್ ಹಾಕಿರುತ್ತೇನೆ ಎಂದರೆ ಸರಿಯಲ್ಲ. ನಾನು ಒಕ್ಕಲುತನ ಮತ್ತು ಹೈನುಗಾರಿಕೆಯಿಂದ ತಿಂಗಳಿಗೆ ರೂ.30 ಸಾವಿರ ಆದಾಯ ಗಳಿಸುತ್ತಿದ್ದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಬಗ್ಗೆ ಯಾವುದೆ ದಾಖಲೆ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ಈ ಎಲ್ಲಾ ಕಾರಣಗಳಿಂದ 2 ನೆ ಎದುರುದಾರರು ಪರಿಹಾರ ಕೊಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಏನೂ  ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ. ಹೇ. ಕೇ. ಸರಿ ಇದೆ.

ಸಹಿ/–

1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ ರಾಣೇಬೆನ್ನೂರು.